**ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಸುಳ್ಯ, ದ.ಕ. ಇವರ ನ್ಯಾಯಾಲಯದಲ್ಲಿ –**

**ಸಿ.ಸಿ.ನಂ.** 1205/2017
**ಸಿ.ಡಬ್ಲ್ಯೂ.**–14
**ಪಿ.ಡಬ್ಲೂ** –9

| | | |
|---|---|---|
| ಸಾಕ್ಷಿದಾರರ ಹೆಸರು | : | ಸುಧಾ ಎಸ್. ಶೆಣೈ |
| ಗಂಡನ ಹೆಸರು | : | ಸುಬ್ರಾಯ ಶೆಣೈ |
| ವಯಸ್ಸು | : | 51 ವರ್ಷ |
| ಉದ್ಯೋಗ | : | ಮುತ್ತೂಟ್ ಮಿನಿ ಫೈನಾನ್ಸ್, ಪುತ್ತೂರು ನಲ್ಲಿ ಉದ್ಯೋಗಿ |
| ವಾಸ | : | ಕೆಮ್ಮಿಂಜೆ, ಪುತ್ತೂರು. |
| ದಿನಾಂಕ | : | 19–08–2025. |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

## ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು ಪುತ್ತೂರಿನ ಮುತ್ತೂಟ್ ಮಿನಿ ಫೈನಾನ್ಸ್ ನಲ್ಲಿ 7 ವರ್ಷಗಳ ಸಿಬ್ಬಂದಿಯಾಗಿ ಕೆಲಸವನ್ನು ಮಾಡಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿನಾಂಕ 22–02–2016 ರಂದು ಹಾಗೂ ದಿನಾಂಕ 30–03–2016 ರಂದು ಆರೋಪಿಯು ನಮ್ಮ ಪುತ್ತೂರಿನ ಮುತ್ತೂಟ್ ಮಿನಿ ಫೈನಾನ್ಸ್ ಗೆ ಚಿನ್ನದ ಸಾಲಕ್ಕಾಗಿ ಮಧ್ಯಾಹ್ನ 3.00 ಗಂಟೆಗೆ ಬಂದಿರುತ್ತಾರೆ. ಆರೋಪಿಯು ನಮ್ಮ ಸಂಸ್ಥೆಗೆ ಬಂದ ಸಮಯದಲ್ಲಿ ಆರೋಪಿಯು ತನ್ನೊಂದಿಗೆ ಅಂದಾಜು 9 ಗ್ರಾಂ ಚಿನ್ನದ ಸರದೊಂದಿಗೆ ಹಾಗೂ 3 ಗ್ರಾಮ್ ತೂಕದ ಎರಡು ಚಿನ್ನದ ಉಂಗುರ ಹಾಗೂ 4 ಗ್ರಾಮ್ ತೂಕದ ಒಂದು ಚಿನ್ನದ ಉಂಗುರಗಳೊಂದಿಗೆ ಹೀಗೆ ಒಟ್ಟು ಮೂರು ಚಿನ್ನದ ಉಂಗುರಗಳೊಂದಿಗೆ ಚಿನ್ನದ ಸಾಲಕ್ಕಾಗಿ ಬಂದಿರುತ್ತಾರೆ. ಸದರಿ

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಚಿನ್ನಾಭರಣಗಳ ಮೇಲೆ ನಾವು ಸುಮಾರು ರೂ.38,000/- ಹಣವನ್ನು ಆರೋಪಿಗೆ ಚಿನ್ನದ ಸಾಲವನ್ನು ನೀಡಿರುತ್ತೇವೆ. ಆ ಸಮಯದಲ್ಲಿ ನಾನು ನಮ್ಮ ಸಂಸ್ಥೆಯ ಸಿಬ್ಬಂದಿಯಾಗಿದ್ದು, ಚಾ.ಸಾ.8 ರವರು ಮೆನೇಜರ್ ಆಗಿದ್ದರು.

ದಿನಾಂಕ 23-07-2016 ರಂದು ಸುಳ್ಯದ ಪೊಲೀಸರು ಆರೋಪಿಯೊಂದಿಗೆ ನಮ್ಮ ಸಂಸ್ಥೆಗೆ ಬಂದಿರುತ್ತಾರೆ. ಆರೋಪಿಯ ಪರಿಚಯ ಇದೆಯೇ ಎಂದು ಪೊಲೀಸರು ನಮ್ಮಲ್ಲಿ ಕೇಳಿದ್ದು, ಆರೋಪಿಯು ನಿಮ್ಮ ಸಂಸ್ಥೆಯಲ್ಲಿ ಎಷ್ಟು ಚಿನ್ನವನ್ನು ಅಡವಿಟ್ಟಿದ್ದರು ಎಂದು ನಮ್ಮಲ್ಲಿ ಕೇಳಿ ಮಾಹಿತಿಯನ್ನು ಪಡೆದುಕೊಂಡಿರುತ್ತಾರೆ. ಆರೋಪಿಯು ನಮ್ಮ ಸಂಸ್ಥೆಯಲ್ಲಿ ಇಟ್ಟ ಚಿನ್ನಾಭರಣಗಳು ಏನೆಕಲ್ಲು ಸುಬ್ರಹ್ಮಣ್ಯ ದೇವಸ್ಥಾನದಿಂದ ಕಳವು ಮಾಡಿದ ಚಿನ್ನಾಭರಣಗಳಾಗಿರುತ್ತದೆ ಎಂದು ಸದರಿ ಪೊಲೀಸರು ನಮ್ಮಲ್ಲಿ ಹೇಳಿರುತ್ತಾರೆ. ಆ ದಿನದಂದು ನಮ್ಮ ಸಂಸ್ಥೆಯ ಮೆನೇಜರರಾದ ಚಾ.ಸಾ.8 ರವರು ರಜೆಯಲ್ಲಿದ್ದ ಕಾರಣ ಪೊಲೀಸರು ನಮ್ಮ ಸಂಸ್ಥೆಗೆ ಬಂದು ಆರೋಪಿಯು ಇಟ್ಟ ಚಿನ್ನಾಭರಣಗಳು ಕಳವಾದ ಚಿನ್ನಗಳು ಆಗಿರುತ್ತವೆ ಎಂದು ನಾನು ಚಾ.ಸಾ.8 ರವರಿಗೆ ತಿಳಿಸಿರುತ್ತೇನೆ. ಚಾ.ಸಾ.8 ರವರು ಮೇಲಧಿಕಾರಿಯವರಿಗೆ ಈ ಘಟನೆ ಕುರಿತು ನಡೆದ ವಿಚಾರವನ್ನು ತಿಳಿಸಿರುತ್ತಾರೆ. ಮೇಲಧಿಕಾರಿಯವರ ಅನುಮತಿ ಮೇರೆಗೆ ಚಾ.ಸಾ.8 ರವರ ಅನುಮತಿಯನ್ನು ನಾನು ಪಡೆದು, ಆರೋಪಿಯು ಅಡವಿಟ್ಟ ಚಿನ್ನಾಭರಣಗಳನ್ನು ನಾನು ಪೊಲೀಸರಿಗೆ ನೀಡಿರುತ್ತೇನೆ.

ಈ ಘಟನೆಯ ಕುರಿತು ನಾನು ಸುಳ್ಯ ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ನಾನು ಈಗ ನ್ಯಾಯಾಲಯದಲ್ಲಿ ಸ್ವತ್ತು ಸ್ವಾಧೀನತಾ ಮಹಜರನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-11 ಎಂದು ನಿಶಾನಿಕರಿಸಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಾನು ನೋಡಿ ಒಪ್ಪಿ ಗುರುತಿಸಿದ್ದು, ಅದನ್ನು ನಿಪಿ-11(ಸಿ) ಎಂದು ಗುರುತಿಸಲಾಯಿತು. ನಾನು ಸ್ವತ್ತು ಸ್ವಾಧೀನತಾ ಮಹಜರಿಗೆ ನನ್ನ ಸಹಿಯನ್ನು ನಮ್ಮ ಸಂಸ್ಥೆಯಲ್ಲಿ ಹಾಕಿರುತ್ತೇನೆ. ಆ ಸಮಯದಲ್ಲಿ ನಮ್ಮ ಸಂಸ್ಥೆಯ ಇಬ್ಬರು ಸಿಬ್ಬಂದಿಗಳು, ಚಾ.ಸಾ.1, ಚಾ.ಸಾ.3, ಚಾ.ಸಾ.21, ಆರೋಪಿ ಹಾಗೂ ಪೊಲೀಸರು ಇದ್ದರು.

ಪೊಲೀಸರು ನಮ್ಮ ಸಂಸ್ಥೆಗೆ ಬಂದು, ಆರೋಪಿಯು ಕಳವು ಮಾಡಿದ ಚಿನ್ನವನ್ನು ಈ ಸಂಸ್ಥೆಯಲ್ಲಿ ಮಾತ್ರವಲ್ಲದೇ ಬೇರೆ ಸಂಸ್ಥೆಯಲ್ಲಿ ಅಡವಿಟ್ಟಿದ್ದಾರೆ ಎಂದು ಹೇಳಿ, ಸದರಿ ಚಿನ್ನವನ್ನು ನಮಗೆ ಕೊಡಬೇಕೆಂದು ನನ್ನಲ್ಲಿ ತಿಳಿಸಿರುತ್ತಾರೆ. ಆ ಪ್ರಕಾರ ಚಿನ್ನವನ್ನು ಪೊಲೀಸರು ಮಹಜರು ಮೂಲಕ ನಮ್ಮಿಂದ ಸ್ವಾಧೀನಪಡಿಸಿಕೊಂಡಿರುತ್ತಾರೆ. ಮಹಜರು ಕ್ರಮವನ್ನು ಸಂಜೆ 4.30-5.30 ಗಂಟೆಯವರೆಗೆ ಪೊಲೀಸರು ನಮ್ಮ ಸಂಸ್ಥೆಯಲ್ಲಿ ಜರಗಿಸಿರುತ್ತಾರೆ. ಆ ಸಮಯದಲ್ಲಿ ಪೊಲೀಸರಿಗೆ ಪ್ಲೆಡ್ಜ್ ಕಾರ್ಡನ್ನು ನಾನು ನೀಡಿರುತ್ತೇನೆ. ಸದರಿ ಪ್ಲೆಡ್ಜ್ ಕಾರ್ಡನ್ನು ನಾನು ಈಗ ನೋಡಿ ಗುರುತಿಸಿದ್ದು, ಅದನ್ನು **ಆರೋಪಿ ಪರ ವಕೀಲರ ತಕರಾರಿನ ಮೇರೆಗೆ ರುಜುವಾತುಪಡಿಸುವ ಹೊಣೆಗಾರಿಕೆಗೆ ಒಳಪಟ್ಟು ನಿಪಿ-21 ಎಂದು ಗುರುತಿಸಲಾಯಿತು.** ನಿಪಿ-21 ರಲ್ಲಿರುವ ಸಹಿಯು ನನ್ನದಾಗಿರಬಹುದು.

ನಾನು ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ನೋಡುತ್ತಿದ್ದು, ಈ ಪ್ರಕರಣದ ಆರೋಪಿಯಾಗಿದ್ದಿರಬಹುದು ಎಂದು ಸಾಕ್ಷಿ ನುಡಿಯುತ್ತಾರೆ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಪೊಲೀಸರು ಆರೋಪಿಯೊಂದಿಗೆ ನಮ್ಮ ಸಂಸ್ಥೆಗೆ ಬಂದ ಸಮಯದಲ್ಲಿ ಆರೋಪಿಯು ಗಡ್ಡವನ್ನು ಬಿಟ್ಟಿರಬಹುದು ಎಂದು ಸಾಕ್ಷಿ ನುಡಿಯುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ.ರವರು ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ  ಮಾನ್ಯ ಸ.ಸ.ಅ.ರವರಿಂದಃ**

ನಾನು ಆರೋಪಿಗೆ ರೂ.38,300/- ಹಣವನ್ನು ನಮ್ಮ ಸಂಸ್ಥೆಯಿಂದ ಸಾಲವಾಗಿ ನೀಡಿರುತ್ತೇನೆ ಎಂದರೆ ಸಾಕ್ಷಿಯು ಖಂಡಿತವಾಗಿ ಇರಬಹುದು ಎಂದು ನುಡಿಯುತ್ತಾರೆ. ನಿಪಿ-11 ಮಹಜರಿಗೆ ನನ್ನ ಜೊತೆ ಆರೋಪಿಯು ತನ್ನ ಸಹಿಯನ್ನು ಮಾಡಿರುತ್ತಾರೆ ಎಂದರೆ ಸರಿ.

ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯೇ ಈ ಪ್ರಕರಣದ ಸಲುವಾಗಿ ಪೊಲೀಸರೊಂದಿಗೆ ನಮ್ಮ ಸಂಸ್ಥೆಗೆ ಬಂದ ವ್ಯಕ್ತಿಯಾಗಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಎನ್.ಎಂ. ವಕೀಲರಿಂದಃ**

ನಮ್ಮ ಪುತ್ತೂರಿನ ಮುತ್ತೂಟ್ ಮಿನಿ ಫೈನಾನ್ಸ್ ಆರ್.ಬಿ.ಐ. ಯಡಿಯಲ್ಲಿ ನೋಂದಣಿಗೊಂಡಿರುತ್ತದೆ ಎಂದರೆ ಸರಿ.  ನಮ್ಮ ಸಂಸ್ಥೆಯು ಹಣದ ಲೇವಾದೇವಿ ಅಥವಾ ಹೆಚ್ಚಿನ ಬಡ್ಡಿ ದರಕ್ಕಾಗಿ ಹಣವನ್ನು ನೀಡುವ ಸಂಸ್ಥೆಯಲ್ಲದೇ ಚಿನ್ನದ ಸಾಲವನ್ನು ನೀಡುವ ಸಂಸ್ಥೆಯಾಗಿರುತ್ತದೆ ಎಂದರೆ ಸಾಕ್ಷಿಯು  ಚಿನ್ನದ ಸಾಲವನ್ನು ಮಾತ್ರ ನಾವು ನಮ್ಮ ಸಂಸ್ಥೆಯಿಂದ ನೀಡುತ್ತೇವೆ ಎಂದು ನುಡಿಯುತ್ತಾರೆ.

ಸಾಕ್ಷಿಯ ಸಹಿ                                                  ನ್ಯಾಯಾಧೀಶರ ಸಹಿ

ನಮ್ಮ ಸಂಸ್ಥೆಯು ಆರ್.ಬಿ.ಐ.ಯಡಿಯಲ್ಲಿ ನೋಂದಣಿಯಾದ ಕುರಿತು ಪೊಲೀಸರಿಗೆ ದಾಖಲೆಯನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ನನಗೆ ಈಗ ನೆನಪಿರುವುದಿಲ್ಲ , ಆದರೆ ಪೊಲೀಸರು ನನ್ನಲ್ಲಿ ಕೇಳಿದ ಎಲ್ಲಾ ದಾಖಲೆಗಳನ್ನು ನಾನು ಪೊಲೀಸರಿಗೆ ನೀಡಿರುತ್ತೇನೆಂದು ನುಡಿಯುತ್ತಾರೆ.

ದಿನಂಪ್ರತಿ ನಮ್ಮ ಸಂಸ್ಥೆಗೆ ಹಾಜರಾದ ಸಿಬ್ಬಂದಿಯವರ ಕುರಿತು ಹಾಜರಾತಿ ಪುಸ್ತಕ ನಮ್ಮ ಸಂಸ್ಥೆಯಲ್ಲಿ ಇರುತ್ತದೆ. ಪೊಲೀಸರು ನಮ್ಮ ಸಂಸ್ಥೆಗೆ ಬಂದರು ಎಂದು ಹೇಳಲಾದ ದಿನದಂದು ನಾನು ನಮ್ಮ ಸಂಸ್ಥೆಯಲ್ಲಿ ಹಾಜರಾಗಿದ್ದೇನೆ ಎಂಬ ಕುರಿತು ನನ್ನಿಂದ ಯಾವುದೇ ದಾಖಲೆಯನ್ನು ಪೊಲೀಸರು ಪಡೆದುಕೊಂಡಿರುವುದಿಲ್ಲ.

ಯಾವುದೇ ಗ್ರಾಹಕರು ನಮ್ಮ ಸಂಸ್ಥೆಗೆ ಬಂದು ಚಿನ್ನಾಭರಣಗಳ ಮೇಲೆ ಸಾಲವನ್ನು ಪಡೆಯಬೇಕು ಎಂದು ಕೇಳಿಕೊಂಡರೆ ಗ್ರಾಹಕನು ಅರ್ಜಿಯನ್ನು ನೀಡಬೇಕೇ ಎಂದರೆ ಸಾಕ್ಷಿಯು ಅರ್ಜಿಯನ್ನು ನೀಡಬೇಕೇಂದೇನಿಲ್ಲ, ಕೆ.ವೈ.ಸಿ. ದಾಖಲೆಯನ್ನು ನಾವು ಸಾಲ ಪಡೆಯುವ ಗ್ರಾಹಕರಿಂದ ಪಡೆದುಕೊಳ್ಳುತ್ತೇವೆ ಎಂದು ನುಡಿಯುತ್ತಾರೆ.

ಆರ್.ಬಿ.ಐ. ನಿಯಮದ ಪ್ರಕಾರ ಯಾವನೇ ವ್ಯಕ್ತಿಯು ನಮ್ಮ ಸಂಸ್ಥೆಗೆ ಬಂದು ಸಾಲವನ್ನು ಪಡೆಯಬೇಕಾದರೆ ಸಾಲ ಪಡೆಯುವ ಗ್ರಾಹಕನು ಅರ್ಜಿಯನ್ನು ನೀಡಬೇಕು ಎಂದರೆ ಸಾಕ್ಷಿಯು ಗ್ರಾಹಕನು ಅರ್ಜಿಯನ್ನು ನೀಡಬೇಕಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ದಿನಾಂಕ 22-02-2016 ರಂದು ಆರೋಪಿಗೆ ಚಿನ್ನದ ಸಾಲವನ್ನು ಚಾ.ಸಾ. 8 ರವರು ನೀಡಿರುತ್ತಾರೆ. ದಿನಾಂಕ 30-03-2016 ರಂದು ಆರೋಪಿಗೆ ಚಿನ್ನದ ಸಾಲವನ್ನು ನಾನು ನೀಡಿರುತ್ತೇನೆ. ಆರೋಪಿಗೆ ಚಿನ್ನದ ಸಾಲವನ್ನು ನೀಡುವ ಮುಂಚೆ ಚಿನ್ನವನ್ನು ಎಲ್ಲಿಂದ ತಂದದ್ದು, ಯಾರ ಚಿನ್ನ ಎಂಬಿತ್ಯಾದಿ ಪ್ರಶ್ನೆಗಳನ್ನು ನಾನು ಆರೋಪಿಯಲ್ಲಿ ವಿಚಾರಿಸಿರುತ್ತೇನೆ. ಆರೋಪಿಯಲ್ಲಿ ಈ ಕುರಿತು ವಿಚಾರಿಸಿದ ಬಗ್ಗೆ ಯಾವುದೇ ದಾಖಲೆ ನಮ್ಮಲ್ಲಿ ಇರುವುದಿಲ್ಲ.

ಆರೋಪಿಯು ನಮ್ಮ ಸಂಸ್ಥೆಗೆ ಬಂದು ಚಿನ್ನವನ್ನು ಅಡವಿಟ್ಟು, ಚಿನ್ನದ ಮೇಲೆ ಸಾಲವನ್ನು ಕೋರುವ ಸಮಯದಂದು ಆರೋಪಿಯು ಅಡವಿಟ್ಟ ಚಿನ್ನಾಭರಣಗಳ description ನ್ನು ನಮೂದು ಮಾಡಿದ್ದು, ಅದು ನಮ್ಮ ಕಚೇರಿಯಲ್ಲಿ ಇರುತ್ತದೆ. ಅದರ ಒಂದು ಪ್ರತಿಯನ್ನು ಆರೋಪಿಗೆ ನಾವು ನೀಡಿರುತ್ತೇವೆ.

ಮೂರು ಚಿನ್ನದ ಉಂಗುರಗಳ ಬಗ್ಗೆ description ನ ಬಗ್ಗೆ ನನಗೆ ಈಗ ಹೇಳಲು ಸಾಧ್ಯವಿಲ್ಲ. ಆರೋಪಿಯು ಅಡವಿಟ್ಟ ಎಲ್ಲಾ ಚಿನ್ನಾಭರಣಗಳ description ನ್ನು ನನಗೆ ಈಗ ಹೇಳಲು ಸಾಧ್ಯವಿಲ್ಲ. ಆರೋಪಿಯು ಅಡವಿಟ್ಟ ಚಿನ್ನಾಭರಣಗಳು ಅಸಲಿ ಚಿನ್ನವೋ-ನಕಲಿ ಚಿನ್ನವೋ ಎಂದು ನಾವು appraiser ರವರ ಮೂಲಕ ಚಿನ್ನವೆಂದು ಖಾತ್ರಿ ಪಡಿಸಿರುತ್ತೇವೆ. ಆದರೆ ಸದರಿ appraiser ರವರ ಹೆಸರು ನನಗೆ ಈಗ ನೆನಪಿರುವುದಿಲ್ಲ.

ದಿನಾಂಕ 22-02-2016 ಹಾಗೂ ದಿನಾಂಕ 30-03-2016 ರಂದು ಆರೋಪಿಯು ನಮ್ಮ ಸಂಸ್ಥೆಗೆ ಬಂದು ಚಿನ್ನವನ್ನು ಅಡವಿಟ್ಟು ಸಾಲ ಪಡೆದುಕೊಂಡ ಬಗ್ಗೆ

ನಿಪಿ-21 ರಲ್ಲಿ ಕಂಡು ಬರುತ್ತದಾ ಎಂದರೆ ಸಾಕ್ಷಿಯು ಒಂದು ದಿನದ ದಿನಾಂಕವು ಇರುತ್ತದೆ , ಆದರೆ ನಿಪಿ-21 ರ ದಾಖಲೆಯಲ್ಲಿ ಸರಿಯಾಗಿ ಕಾಣುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-21 ರಲ್ಲಿ ಆರೋಪಿಯು ಅಡವಿಟ್ಟ ಸರ ಹಾಗೂ ಚಿನ್ನದುಂಗುರಗಳ ನಮೂನೆಯ ನಮೂದು ಇರುತ್ತದಾ ಎಂದರೆ ಸಾಕ್ಷಿಯು ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ-21 ರ ಪ್ರಕಾರ ಸ್ವಾತಿ ಸಿ. ಎಂಬವರು ಸದರಿ ಆರೋಪಿಯು ಕಳವು ಮಾಡಿದ ಚಿನ್ನಾಭರಣಗಳನ್ನು ವಾಪಾಸ್ಸು ಪಡೆದುಕೊಂಡ ಬಗ್ಗೆ ನಮೂದು ಇದೆಯಾ ಎಂದರೆ ಸಾಕ್ಷಿಯು ಸ್ವಾತಿ ಸಿ. ಎಂಬವರು ನಾಮಿನಿಯಾಗಿದ್ದು ನಿಪಿ-21 ರ ದಾಖಲೆಯಲ್ಲಿ ನಾಮಿನಿಯ ನೆಲೆಯಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-21 ರಲ್ಲಿ ಸ್ವಾತಿ ಸಿ. ರವರು ನಾಮಿನಿಯಾಗಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಆರೋಪಿಯು ದಿನಾಂಕ 22-02-2016 ಹಾಗೂ ದಿನಾಂಕ 30-03-2016 ರಂದು ನಮ್ಮ ಸಂಸ್ಥೆಗೆ ಬಂದದ್ದೇ ಇಲ್ಲ ಎಂದರೆ ಸರಿಯಲ್ಲ. ಆರೋಪಿಯು ನಮ್ಮ ಸಂಸ್ಥೆಯಲ್ಲಿ ಯಾವುದೇ ಚಿನ್ನಾಭರಣಗಳನ್ನು ಅಡವಿಟ್ಟದ್ದೇ ಇಲ್ಲ ಎಂದರೆ ಸರಿಯಲ್ಲ. ಯಾರೋ ಇಟ್ಟಂತಹ ಚಿನ್ನಾಭರಣಗಳಿಗೆ ನಾನು ಪೊಲೀಸರ ಒತ್ತಡಕ್ಕೆ ಮಣಿದು ನಿಪಿ-21 ರ ದಾಖಲೆಯನ್ನು ಸೃಷ್ಟಿಸಿರುತ್ತೇನೆಂದರೆ ಸರಿಯಲ್ಲ.

ಪೊಲೀಸರು ನಮ್ಮ ಸಂಸ್ಥೆಗೆ ಬಂದಾಗ ನಮ್ಮ ಸಂಸ್ಥೆಯಲ್ಲಿ ಒಂದು ದಾಖಲೆಗೆ ನಾನು ಒಂದು ಸಹಿಯನ್ನು ಹಾಕಿರಬಹುದು. ಚಾ.ಸಾ.1, ಚಾ.ಸಾ. 3, ಚಾ.ಸಾ.21 ರವರು ದೇವಸ್ಥಾನದ ಟ್ರಸ್ಟಿಯಾಗಿರುತ್ತಾರೆಂದು ಪೊಲೀಸರು ನನ್ನಲ್ಲಿ ಹೇಳಿದ್ದು, ಆ

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಪ್ರಕಾರ ಅವರ ಬಗ್ಗೆ ತಿಳಿದುಕೊಂಡಿರುತ್ತೇನೆ. ನಾನು ಸಹಿ ಮಾಡಿದ ದಾಖಲೆಯು ಎಷ್ಟು ಪುಟಗಳನ್ನು ಒಳಗೊಂಡಿತ್ತು ಎಂದು ನನಗೆ ಈಗ ನೆನಪಿರುವುದಿಲ್ಲ. ನಾನು ಸಹಿ ಮಾಡಿದ್ದೇನೆ ಎನ್ನಲಾದ ದಾಖಲೆಗೆ ಪ್ರತೀ ಪುಟಕ್ಕೆ ನನ್ನ ಸಹಿಯನ್ನು ನಾನು ಹಾಕಿರುವುದಿಲ್ಲ. ಚಾ.ಸಾ.1 , 3 ಹಾಗೂ 21 ರವರು ನನ್ನ ಸಮಕ್ಷಮದಲ್ಲಿ ದಾಖಲೆಗೆ ಸಹಿಯನ್ನು ಹಾಕಿರುತ್ತಾರೆ. ಚಾ.ಸಾ.1 , 3 ಹಾಗೂ 21 ರವರು ನಾನು ಸಹಿ ಮಾಡಿದ ದಾಖಲೆಯ ಪ್ರತೀ ಪುಟಗಳಿಗೆ ಸಹಿಯನ್ನು ಹಾಕಿದ್ದಾರೋ-ಇಲ್ಲವೋ ಎಂದು ನನಗೆ ಈಗ ನೆನಪಿರುವುದಿಲ್ಲ. ಸದರಿ ದಿನದಂದು ನಮ್ಮ ಸಂಸ್ಥೆಯ ಸಿಬ್ಬಂದಿಯವರು ಸದರಿ ನಾಲ್ಕು ಐಟಂಗಳ ಚಿನ್ನಾಭರಣಗಳನ್ನು ಅಳತೆ ಮಾಡಿರುತ್ತಾರೆ. ಸದರಿ ಚಿನ್ನಾಭರಣಗಳ ಪೈಕಿ ಮೂರು ಚಿನ್ನದ ಉಂಗುರಗಳನ್ನು ಒಂದು ಪ್ಯಾಕೇಟ್ ನಲ್ಲಿ, ಒಂದು ಪ್ಯಾಕೇಟ್ ನಲ್ಲಿ ಒಂದು ಚಿನ್ನದ ಸರವನ್ನು ಪ್ರತ್ಯೆ-ಪ್ರತ್ಯೇಕವಾಗಿ ಪ್ಯಾಕ್ ಮಾಡಿರುತ್ತೇವೆ. ಸದರಿ ಪ್ರತ್ಯೆ-ಪ್ರತ್ಯೇಕವಾಗಿ ಪ್ಯಾಕ್ ಮಾಡಿದ ಚಿನ್ನಾಭರಣಗಳನ್ನು ನಾವು ಪೊಲೀಸರಿಗೆ ಹಸ್ತಾಂತರಿಸಿದ್ದು, ಪೊಲೀಸರು ಅದನ್ನು ಸ್ವಾಧೀನಪಡಿಸಿಕೊಂಡು, ಮಹಜರು ಕ್ರಮವನ್ನು ತಯಾರಿಸಿರುತ್ತಾರೆ. ಅದರ ಹೊರತಾಗಿ ಬೇರಾವ ಪ್ರಕ್ರಿಯೆಯನ್ನು ಪೊಲೀಸರು ನಮ್ಮ ಸಂಸ್ಥೆಯಲ್ಲಿ ಮಾಡಿದ್ದೇ ಇಲ್ಲ ಎಂದರೆ ಸರಿ.

ದಿನಾಂಕ 22-02-2016 ರಂದು,ದಿನಾಂಕ 30-03-2016 ಹಾಗೂ ದಿನಾಂಕ 23-07-2016 ರಂದು ನಾನು ನಮ್ಮ ಸಂಸ್ಥೆಯಲ್ಲಿ ಕರ್ತವ್ಯದಲ್ಲಿ ಇರಲೇ ಇಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮದಲ್ಲಿ ಪೊಲೀಸರು ಯಾವುದೇ ಮಹಜರನ್ನು ಮಾಡಿ ಸ್ವತ್ತುಗಳನ್ನು ವಶಪಡಿಸಿಕೊಂಡದ್ದು ಇಲ್ಲ ಎಂದರೆ ಸರಿಯಲ್ಲ. ಆರೋಪಿಗೂ

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಹಾಗೂ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಚಿನ್ನಾಭರಣಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ–21 ನ್ನು ನಾನು ಹಾಗೂ ಪೊಲೀಸರು ಸೃಷ್ಟಿಸಿಕೊಂಡ ದಾಖಲೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಮ್ಮ ಸಂಸ್ಥೆಯಲ್ಲಿ ಸಿ.ಸಿ. ಕ್ಯಾಮೆರಾದ ಅಳವಡಿಕೆ ಇತ್ತು. ನಾನು ಪೊಲೀಸರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿಯ ಸಹಿ

ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಕಾರಿಯವರು, ಸುಳ್ಯ, ದ.ಕ.

ಸಾಕ್ಷಿಯ ಸಹಿ

ನ್ಯಾಯಾಧೀಶರ ಸಹಿ